## ಇಲ್ಲಿಯವರೆಗೆ



ಅಬ್ದುಲ್ಲಾ ಆದ ನಂತರ ಹರಿಲಾಲ ಇಸ್ಲಾಮಿನ ಪ್ರಚಾರಕನಾಗುತ್ತಾನೆ. ಅದಾಗಿ ಹಿಂದೂ ಆದ ನಂತರ ತಕ್ಷಣವೇ ಆರ್ಯಸಮಾಜವು ಅವನಿಗೆ ಒಂದು ವಿಶೇಷ ಕೆಲಸ ವಹಿಸುತ್ತದೆ. ಹಿಂದೂ ಆದ ಅಬ್ದುಲ್ಲಾನಿಗೆ ಹೊಸದಾಗಿ ಹೀರಾಲಾಲ್ ಗಾಂಧಿ ಎಂದು ನಾಮಕರಣ ಮಾಡುತ್ತದೆ. ಹೀರಾಲಾಲ್ ಆದ ಹರಿಲಾಲನಿಗೆ ದಿಲ್ಲಿಯ ಭಾರತೀಯ ಶ್ರದ್ಧಾನಂದ ಶುದ್ಧಿ ಸಭೆಯು ಮಿಶನರಿಯ ಪದವಿಗೆ ಪ್ರಸ್ತಾಪಿಸುತ್ತದೆ. ಆಗ ಅವನು ಆ ಶುದ್ಧಿಸಭೆಯ ಮಿಶನರಿಯಾಗುತ್ತಾನೆ. ಹರಿಲಾಲನ ಈ ಎಲ್ಲಾ ಚೇಷ್ಟೆಗಳು ಯಾರಿಂದಲೂ ಮುಚ್ಚುಮರೆಯಾಗಿರಲು ಸಾಧ್ಯವಿರಲಿಲ್ಲ. ಬಾಪೂ ಅವರಿಗೂ ಈ ಸುದ್ದಿ ತಿಳಿಯುತ್ತದೆ. ಅವರು ಹರಿಲಾಲ ಮತ್ತೆ ಮತಾಂತರಕ್ಕೆ ಸಂಬಂಧಿಸಿದ ಸಾರ್ವಜನಿಕ ನಿವೇದನೆಯನ್ನು ಓದುತ್ತಾರೆ. ಆಗ ಅವರ ಮನಸ್ಸಿನಲ್ಲಿ ಮತ್ತೆ ಅಲ್ಪಸ್ವಲ್ಪ ಕೋಲಾಹಲವುಂಟಾಗುತ್ತದೆ. ಬಾಪೂ ಅವರಿಗೆ ಹೀರಾಲಾಲ ವಿವರವಾದ ಪತ್ರ ಬರೆಯುತ್ತಾನೆ.

ಈ ಮಧ್ಯೆ ಬಾಪೂ ಅವರ ಹೃದಯವಾಣಿಯಂತಿದ್ದ 'ಹರಿಜನ' ಪತ್ರಿಕೆಯನ್ನು ಸರ್ಕಾರ ನಿಲ್ಲಿಸುತ್ತದೆ. ತಮ್ಮ ವಿಚಾರಗಳನ್ನು ಎಲ್ಲರಿಗೂ ತಲುಪಿಸುವ ಉದ್ದೇಶದಿಂದ ಬಾಪೂ ಅವರು ನಿರಂತರವಾಗಿ ದೇಶದ ಮೂಲೆಮೂಲೆಗಳಲ್ಲಿ ಪ್ರಯಾಣಿಸಲಾರಂಭಿಸುತ್ತಾರೆ. ಶೀಘ್ರವೇ ದೇಶದೆಲ್ಲೆಡೆ ಹೊಸ ಸಂಘರ್ಷವೊಂದರ ಆರಂಭವಾಗುವ ಲಕ್ಷಣಗಳೂ ಗೋಚರಿಸುತ್ತವೆ.

ಇತ್ತ ಕಡೆ ಬಾ ಅವರ ಆರೋಗ್ಯ ಹದಗೆಡುತ್ತಿತ್ತು. ವೈದ್ಯರ ಯಾವ ಚಿಕಿತ್ಸೆಗಳೂ ಫಲಪ್ರದವಾಗುವ ಲಕ್ಷಣಗಳು ಕಂಡುಬರುತ್ತಿರಲಿಲ್ಲ. ಔಷಧಿಗಳು ತಮ್ಮ ಪ್ರಭಾವವನ್ನು ಬೀರುತ್ತಿರಲಿಲ್ಲ. ಹೀರಾಲಾಲ ಗಾಂಧಿ ಕೂಡ ಕುಡಿತವಿಲ್ಲದೆ ಒಂದು ದಿನವೂ ಇರಲು ಸಾಧ್ಯವಿಲ್ಲ ಎಂಬ ಹಂತಕ್ಕೆ ಬಂದು ತಲುಪುತ್ತಾನೆ.

ಇಂಜೆಕ್ಷನ್ ಕೊಟ್ಟು ಅವಳ ನೋವನ್ನು ಹೆಚ್ಚಿಸಬೇಕೆಂದಿದ್ದೀಯ?'

ದೇವದಾಸನ ಬಳಿ ಇದಕ್ಕೆ ಉತ್ತರವಿರಲಿಲ್ಲ. ಅವನು ಮೌನ ವಹಿಸಿದ. ಪೆನ್ಸಿಲಿನ್ ಕೊಡುವ ವಿಷಯಕ್ಕೆ ಸಂಪೂರ್ಣ ವಿರಾಮ ಬಿತ್ತು.

ಬಾ ಅವರು ರಾತ್ರಿಯಿಡಿ ಮೂರ್ಛಾವಸ್ಥೆಯಲ್ಲಿದ್ದರು. ಬೆಳ್ಳಂಬೆಳಿಗ್ಗೆ ಅವರಿಗೆ ಎಚ್ಚರವಾಯಿತು. ಅವರ ಪ್ರಜ್ಞೆ ಮರಳಿ ಬಂದಿದೆ ಎಂದು ತೋರಿತು. ಬಾಪೂ ಅವರೊಂದಿಗೆ ಆಶ್ರಮವಾಸಿಗಳು ಭಜನೆ ಹಾಡುತ್ತಿದ್ದರು. ಆಗಾಗ ಬಾಪೂ ರಾಮಚರಿತ ಮಾಸದ ಚೌಪದಿಗಳು ಅಥವಾ ಇನ್ನ್ಯಾವುದೋ ಪುಸ್ತಕವನ್ನು ಬಾ ಅವರಿಗೆ ಓದಿ ಹೇಳುತ್ತಿದ್ದರು.

'ನೀವು ...ನೀವೆಲ್ಲರೂ ಸ್ವಲ್ಪ ಹೊತ್ತು ನಿದ್ರೆ ಮಾಡಿ.' ಬಾ ಅವರು ತಮ್ಮ ದುರ್ಬಲ ಸ್ವರದಲ್ಲಿ ಬಾಪೂ ಅವರಿಗೆ ಹೇಳಿದರು, 'ಸಾಯುವ ವೇಳೆಯಲ್ಲಿ ನಾನು ನಿಮ್ಮನ್ನು ಕರೆಸಿ ಕೊಳ್ಳುತ್ತೇನೆ... ನೀವು ಬರುವವರೆಗೆ ನನ್ನ ಉಸಿರನ್ನು ಹಿಡಿದುಕೊಂಡಿರುತ್ತೇನೆ...' ಹೀಗೆಂದು ಬಾ ಅವರು ತಮ್ಮ ತಲೆಯ ಬಳಿ ಕೂತಿದ್ದ ಮುದ್ದು ಮನುವಿನ ಹೆಗಲ ಮೇಲೆ ಕೈಯಿಟ್ಟರು. ನಂತರ ಅವರ ಕಣ್ಣುಗಳು ಮತ್ತೆ ಮುಚ್ಚಿಕೊಂಡವು.

* * *

ಬೆಳಿಗ್ಗೆ ಹರಿಲಾಲ ಮತ್ತೊಮ್ಮೆ ಬಾ ಅವರ ಬಳಿಗೆ ಬಂದ. ಈಗ ಅವನ ಅಮಲು ಇಳಿದಿತ್ತು. ಲಜ್ಜೆ ಮತ್ತು ಪಶ್ಚಾತ್ತಾಪದಿಂದ ಹರಿಲಾಲ ವ್ಯಾಕುಲಗೊಂಡಿದ್ದ. ಎಲ್ಲರೂ ಮೌನ ತಾಳಿದ್ದರು. ಇನ್ನು ಔಷಧಿಗಳಿಂದ ಉಪಯೋಗವಿಲ್ಲವೆಂಬುದು ಎಲ್ಲರಿಗೂ ತಿಳಿದಿತ್ತು. ಗಂಗಾಜಲವನ್ನು ಬಾ ಅವರ ಹಾಸಿಗೆಯ ಬಳಿಯೇ ಇಡಲಾಗಿತ್ತು. ಆಗಾಗ ಬಾ ಅವರ ತುಟಿಗಳು ತೆರೆದಾಗ, ಗಂಗಾಜಲದ ಹನಿಗಳನ್ನು ಅವರ ಬಾಯಿಗೆ ಹಾಕಲಾಗುತ್ತಿತ್ತು. ಮಧ್ಯಾಹ್ನ ಕಳೆಯುವವರೆಗೆ ನಿಶ್ಶಬ್ದತೆ ವ್ಯಾಪಿಸಿತ್ತು.

ಸಂಜೆ ಬಾ ಮತ್ತೆ ಕಣ್ಣುಗಳನ್ನು ತೆರೆದರು. ಆಶ್ರಮವಾಸಿಗಳು ಅವರ ಹಾಸಿಗೆಯ ಸುತ್ತಮುತ್ತ ತಲೆ ತಗ್ಗಿಸಿ, ಕೈಮುಗಿದು ನಿಂತಿದ್ದರು. ಬಾ ಅವರ ತುಟಿಗಳಲ್ಲಿ ಮಂದ ಮುಗುಳ್ನಗೆ ಸೂಸಿತು. ಅವರ ದೃಷ್ಟಿ ಬಾಪೂ, ಹರಿಲಾಲ, ದೇವದಾಸ, ಮನು ಎಲ್ಲರ ಮೇಲೂ ಹರಿಯಿತು. ನಂತರ ಅವರು ಕ್ಷೀಣ ಸ್ವರದಲ್ಲಿ ಹೇಳಿದರು

'ಇನ್ನು ನಾನು ಹೊರಟೆ. ಒಂದಲ್ಲ ಒಂದು ದಿನ ಹೋಗಲೇ ಬೇಕಲ್ಲ, ಅದು ಇವತ್ತೇ ಯಾಕಾಗಬಾರದು?'

ಹೀಗೆಂದು ಬಾ ಅವರು ಪಕ್ಕದಲ್ಲಿ ಕೂತಿದ್ದ ಬಾಪೂ ಅವರ ಕೈಯಲ್ಲಿ ತಮ್ಮ ಕೈಯನ್ನಿಟ್ಟರು. ನಂತರ ಪ್ರಾರ್ಥನೆ ಮಾಡುವವರಂತೆ ಅವರ ತುಟಿಗಳು ಬಡಬಡಿಸಿದವು. ಕಡೆಗೆ ಅವರು ಎಲ್ಲರಿಗೂ ಕೇಳಿಸುವಂತೆ ಹೇಳಿದರು, 'ಪ್ರಭು! ನೀನೇ ನನಗೆ ಆಶ್ರಯದಾತ. ದೀನಾನಾಥ, ನನಗೆ ನಿನ್ನ ಕೃಪೆ ಬೇಕು.'

ಬಾ ಅವರ ತುಟಿಗಳು ಸ್ವಲ್ಪ ವಾಲಿದವು. ಅಲ್ಲಿ ಕಲೆತಿದ್ದವರು ರಾಮನಾಮವನ್ನು ಜಪಿಸಲು ಆರಂಭಿಸಿದರು. ಬಾ ಅವರ ಪ್ರಾಣ ದೇವರಲ್ಲಿ ಲೀನವಾಗಿತ್ತು. ದೇವದಾಸ ಮತ್ತು ಮನು, ಬಾ ಅವರ ಮೃತದೇಹವನ್ನು ಅಪ್ಪಿಕೊಂಡರು. ಬಾಪೂ ವಿಚಲಿತರಾಗದೆ ಬಾ ಅವರ ಬೀಳ್ಕೊಡುಗೆಯನ್ನು, ಅರವತ್ತೆರಡು ವರ್ಷಗಳ ಕಾಲ ಸಂಗಾತಿಯಾಗಿದ್ದ ಬಾ ಅವರ ಅಂತಿಮ ಕ್ಷಣಗಳನ್ನು ತಮ್ಮ ಅಂತರಾತ್ಮದಲ್ಲಿ ಇಳಿಸಿಕೊಳ್ಳುತ್ತಿದ್ದರು. ಹರಿಲಾಲ ಕಣ್ಣುಗಳನ್ನೆತ್ತದೆ ತಲೆ ತಗ್ಗಿಸಿ ಬಾ ಅವರ ಕಾಲುಗಳ ಬಳಿ ಕೂತಿದ್ದ.

### ಮೂವತ್ತೆಂಟು

ಹರಿಲಾಲನ ತನುಮನ ಈಗ ಸಂಪೂರ್ಣ ಚೂರುಚೂರಾಗಿತ್ತು. ಬಾ ಅವರ ನಿಧನದ ನಂತರ ಚೂರುಚೂರಾದ ಆ ತನುಮನದಲ್ಲಿ ವೃದ್ಧನೊಬ್ಬ ಪ್ರವೇಶಿಸಿದಂತಿತ್ತು. ಅನೇಕ ವರ್ಷಗಳಿಂದ ಪಾಲಿಸಿಕೊಂಡು ಬಂದಿದ್ದ ದುಶ್ಚಟಗಳು ಹಾಗೂ ನಿರರ್ಥಕ ಅಲೆದಾಟ ಅವನನ್ನು ಸಂಪೂರ್ಣವಾಗಿ ದಣಿಸಿತ್ತು. ಇದುವರೆಗೆ ಶರೀರದಲ್ಲಿ ಸ್ವಲ್ಪ ಜೀವವಿತ್ತು, ಅದು ನಿರಂತರ ಮಾನಸಿಕ ಅಶಾಂತಿಯ ನಡುವೆ ಹೇಗೋ ಬದುಕಿತ್ತು; ಅವನ ಮಾನಸಿಕ ಹೊಯ್ದಾಟ ಎಲ್ಲೆಯನ್ನು ಮೀರಿತ್ತು.

ಮಗ ಮತ್ತು ಹೆಣ್ಣು ಮಕ್ಕಳ ವಿವಾಹವನ್ನು ಬಾಪೂ, ಬಾ ಅವರು ಬದುಕಿರುವಾಗಲೇ ನೆರವೇರಿಸಿದ್ದರು. ದೊಡ್ಡ ಮಗಳು ರಾಮಿಯ ವಿವಾಹದಲ್ಲಿ ಹರಿಲಾಲ ಖುದ್ದು ಉಪಸ್ಥಿತನಿದ್ದ; ಇದನ್ನು ಹೊರತುಪಡಿಸಿ ಅವನು ಬೇರಾವ ಮಕ್ಕಳ ಮದುವೆಗೂ ಬಂದಿರಲಿಲ್ಲ. ಪುತ್ರ ಕಾಂತಿಯನ್ನು ತನ್ನೊಂದಿಗಿಟ್ಟುಕೊಂಡು, ಅವನಿಗೆ ವೈದ್ಯಕೀಯ ಶಿಕ್ಷಣವನ್ನು ಕೊಡಿಸುವುದು ಕನಸೇ ಆಗಿತ್ತು. ತನ್ನ ಇಪ್ಪತ್ತಾರನೆಯ ವಯಸ್ಸಿಗೆ ಬಾಪೂ ಅವರ ಇಚ್ಛೆಗೆ ವಿರುದ್ಧವಾಗಿ ಕಾಂತಿ ಮೆಟ್ರಿಕ್ ಪಾಸು ಮಾಡಿದ್ದ. ಪ್ರಸ್ತುತ ಅವನು ಚಿಕಿತ್ಸಾ ಶಾಸ್ತ್ರದಲ್ಲಿ ಶಿಕ್ಷಣವನ್ನು ಪಡೆಯಲು ಮೈಸೂರಿನ ಕಾಲೇಜಿಗೆ ದಾಖಲಾಗಿದ್ದ. ಕಾಂತಿಲಾಲ್ ಮತ್ತು ಅವನ ಹೆಂಡತಿ ಸರಸ್ವತಿ ಇಬ್ಬರು ಮೈಸೂರಿನಲ್ಲಿ ಪ್ರತ್ಯೇಕ ಮನೆಯಲ್ಲಿ ವಾಸಿಸುತ್ತಾ ವಿದ್ಯಾಭ್ಯಾಸವನ್ನೂ ಸಹ ಮಾಡುತ್ತಿದ್ದರು. ಬೆಳಿಗ್ಗೆ ಅಥವಾ ಸಂಜೆಯ ಬಿಡುವಿನಲ್ಲಿ ಅಕ್ಕಪಕ್ಕದ ಪುರುಷರು ಮಹಿಳೆಯರನ್ನು ಸೇರಿಸಿ ನೇಯ್ಗೆಯ ತರಗತಿಗಳನ್ನು ನಡೆಸುತ್ತಿದ್ದರು, ಪ್ರಾರ್ಥನೆಯನ್ನು ಮಾಡುತ್ತಾ ಇಂಥ ಇನ್ನಿತರ ಗಾಂಧಿವಾದದ ಚಟುವಟಿಕೆಗಳನ್ನು ತೊಡಗಿಸಿಕೊಂಡಿರುತ್ತಿದ್ದರು. ಆಗ ಸರಸ್ವತಿ ಇಪ್ಪತ್ತನೆ ವಯಸ್ಸಿಗೆ ಕಾಲಿಟ್ಟಿದ್ದಳು.

* * *